SRI R. S. PATIL (Minister for Labour and Excise).—

(a) A total extent of 10.53 acres, 21 guntas of Excise Land has been encroached in Arsikere Taluk from the year 1960 and onwards. The details are furnished Hobliwise hereunder :

		A. G.
(1)	Kasaba Hobli ...	220—28
(2)	Javagal Hobli ...	85—00
(3)	Kanakatte Hobli ...	54—08
(4)	Gandasi Hobli ...	313—00
(5)	Banavara Hobli ...	380—25
	Total ...	1053—21

(b) Yes

(c) Yes

ಶ್ರೀ ಡಿ. ಬಿ. ಗಂಗಾಧರಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ, ೧೯೬೦ನೇ ಇಸವಿಯಿಂದ ೧೦೫೩ ಎಕರೆ, ಅಬಕಾರಿ ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆಂದು ತಿಳಿಸಿದ್ದೀರಿ. ಮತ್ತು ಇದನ್ನು ರಿಲೀಸ್ ಮಾಡುವ ಅವಶ್ಯಕತೆ ಇದೆಯೆಂದೂ ಸಹ ತಾವು ಹೇಳಿದ್ದೀರಿ, ಆದರೆ ಬಗ್ಗೆ ಏನು ಕಾರ್ಯ ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ, ಯಾವಾಗ ಅವರಿಗೆ ಜಮೀನನ್ನು ರಿಲೀಸ್ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು ?

† ಶ್ರೀ ಆರ್. ಎಸ್. ಪಾಟೀಲ್.—ಯಾವಾಗ ರಿಲೀಸ್ ಮಾಡುತ್ತೇವೆ, ಯಾವಾಗ ಅಬಕಾರಿ ಜಮೀನನ್ನು ಕೊಡುತ್ತೇವೆಂದು ಹೇಳುವುದು ಕಷ್ಟ. ಅಬಕಾರಿ ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆಯೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೇವೆ. ಎನ್‌ಕ್ರೋಚ್ ಮಾಡಿದವರ ಕಡೆಯಿಂದ ಅರ್ಜಿಗಳು ನಮಗೆ ಬಂದರೆ ಅವುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಹಿಂದುಳಿದವರಿಗೆ ಸೂಕ್ತ ಪ್ರಾಶಸ್ಯ ಕೊಡುತ್ತೇವೆ. ಇದರಲ್ಲಿ ಯಾರಾದರೂ ಶ್ರೀಮಂತರು ಇದ್ದರೆ ಅವರಿಗೂ ಸಿಂಪತಿಟಿಕ್ ಆಗಿ ನೋಡಬೇಕು ಎಂದರೆ ಅದು ಆಗುವುದಿಲ್ಲ.

ಶ್ರೀ ಡಿ. ಬಿ. ಗಂಗಾಧರಪ್ಪ.—ನಾವು ಹಿಂದುಳಿದವರಿಗೆ, ಬಡವರಿಗೆ ಈ ಜಮೀನನ್ನು ಕೊಡಬೇಕ ಎಂದು ಕೇಳಿದ್ದೇವೆ. ನನಗೆ ತಿಳಿದಮಟ್ಟಿಗೆ, ಇಲಾಖೆಯವರಿಂದ ಶ್ರೀಮಂತರಿಗೆ ಕಿರುಕುಳ ಆಗುತ್ತಿಲ್ಲ, ಬಡವರಿಗೆ ಮಾತ್ರ ಕಿರುಕುಳ ಆಗುತ್ತದೆ. ದಯವಿಟ್ಟು ಇದರ ಬಗ್ಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ.

Sale Tax Collected on Arecanut

889. SRI L. T. THIMMAPPA HEGADE (Sagar).—Will the Minister or Finance be pleased to state :—

(a) the State tax collected on the sale of Arecanut per annum fince 1972-73 and up-to-date ;

(b) the amount of Central Sales Tax, the rates at which the same was collected each year ?

SRI S. M. YAHYA (Minister for Finance).—

(a) The details of State Sales Tax collected on Arecanut from 1972-73 and up-to date are as follows :—

Year	Tax collected (Rs. in lakhs)
1972-73	60.73
1973-74	90.04
1974-75	114.36
1975-76	147.19
1976-77	170.80
1977-78	183.92

(b) The amoont of Central Sales Tax collected and their rates from 1972-73 and up-to-date are as follows :—

Year	Tax Rates	Tax collected (in lakhs)
1972-73	2% 0.02	15.01
1973-74	2% 0.02 *	17.81
1974-75	3%	20.75
1975-76	3½%	27.76
1976-77	3½%	41.55
1977-78	3½%	23.47

ಶ್ರೀ ಎಲ್. ಟಿ. ತಿಮ್ಮಪ್ಪ ಪಗಡೆ.—ರಾಜ್ಯದಲ್ಲಿ ಅಡಿಕೆ ವ್ಯಾಪಾರದ ಮೇಲೆ ೧೯೭೨-೭೩ರಿಂದ ಮಾರಾಟ ಕರ ಯಾವ ಯಾವ ದರದಲ್ಲಿತ್ತು ಎನ್ನುವುದನ್ನು ಹೇಳಬಹುದೇ ?

† ಶ್ರೀ ಎಸ್. ಎಂ. ಯಾಹ್ಯಾ.—೧೯೭೨-೭೩ರಲ್ಲಿ ೨ ಪರ್ಸೆಂಟ್
೧೯೭೩-೭೪ರಲ್ಲಿ ೨ ಪರ್ಸೆಂಟ್
೧೯೭೪-೭೫ರಲ್ಲಿ ೩ ಪರ್ಸೆಂಟ್
೧೯೭೫-೭೬ರಲ್ಲಿ ಮೂರೂವರೆ ಪರ್ಸೆಂಟ್
೧೯೭೬-೭೭ರಲ್ಲಿ ಮೂರೂವರೆ ಪರ್ಸೆಂಟ್
೧೯೭೭-೭೮ರಲ್ಲಿ ಮೂರೂವರೆ ಪರ್ಸೆಂಟ್

ಶ್ರೀ ಎಲ್. ಟಿ. ತಿಮ್ಮಪ್ಪ ಪೆಗಡೆ.—ಹಾಗಿದ್ದರೆ, ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಮತ್ತು ರಾಜ್ಯದ್ದು ಒಂದೇ ರೀತಿಯ ಕರ ಇತ್ತೇ ?

ಶ್ರೀ ಎಸ್. ಎಂ. ಯಾಹ್ಯಾ.—ಇಲ್ಲ, ನಮ್ಮದು ಕಡಿಮೆ ಇದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಪೆಗಡೆ.—ನಮ್ಮ ರಾಜ್ಯದಲ್ಲಿ ಅಡಿಕೆ ವ್ಯಾಪಾರದ ಮೇಲೆ ಮಾರಾಟ ಕರ ಯಾವ ದರದಲ್ಲಿತ್ತು ಎನ್ನುವುದೇ ನನ್ನ ಪ್ರಶ್ನೆ ?

ಶ್ರೀ ಎಸ್. ಎಂ. ಯಾಹ್ಯಾ.—ಅದನ್ನು ನಾವು ನಮ್ಮ ಉತ್ತರದಲ್ಲಿಯೇ ಕೊಟ್ಟಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಪೆಗಡೆ.—ನೀವು ಉತ್ತರದಲ್ಲಿ ಕೊಟ್ಟಿರುವುದು ಸೆಂಟ್ರಲ್ ಸೇಲ್ಸ್‌ಟಾಕ್ಸ್ ಮಾತ್ರ. ನಮ್ಮ ರಾಜ್ಯದ್ದು ಏಷ್ಟು ಎಂಬುದನ್ನು ತಿಳಿಸುತ್ತೀರಾ ?

* The additional tax of 0.02 has been levied as per Section 6(B

ಶ್ರೀ ಎಸ್. ಎಂ. ಯಾಹ್ಯಾ.—ತಿಳಿಸುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ರಾಜ್ಯದಲ್ಲಿ ಆಡಿಕೆಯ ಧಾರಣೆ ಹಿಂದೆ ೩೫೦ ರೂಪಾಯಿಗಳು ಒಂದು ಕ್ವಿಂಟಾಲ್‌ಗೆ ಇದ್ದುದು ಇವತ್ತು ೧೧೦೦ ರೂಪಾಯಿಗಳಾಗಿದೆ, ಉತ್ಪಾದನೆಯೂ ಕೂಡ ಹೆಚ್ಚಾಗಿದೆ. ಉತ್ಪಾದನೆ ಹೆಚ್ಚಾಗಿದ್ದು, ಆಡಿಕೆಯ ಧಾರಣೆಯು ಹೆಚ್ಚಾಗಿದ್ದು. ಮಾರಾಟ ಕರ ಕಡಿಮೆ ವಸೂಲಾಗುವುದಕ್ಕೆ ಕಾರಣ ಏನು ? ನಮ್ಮ ರಾಜ್ಯಕ್ಕೆ ಇದರಿಂದ ಹೆಚ್ಚು ಆದಾಯ ಬರಬೇಕಾಗಿತ್ತು ಏನ್ನುವುದು ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಅರ್ಥವಾಗುವುದಿಲ್ಲವೇ ?

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಇದರ ಮೇಲೆ ಹೆಚ್ಚು ಕರ ಹಾಕಬೇಕು ಎಂದು ಹೇಳುವುದಾದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ೧೯೭೫ರಲ್ಲಿದ್ದ ಅಡಿಷನಲ್ ಟ್ಯಾಕ್ಸನ್ನು ನಾವು ತೆಗೆದುಹಾಕಿದ್ದೇವೆ. ಮತ್ತೇ ಮಾನ್ಯ ಸದಸ್ಯರು ತೆರಿಗೆಯನ್ನು ಹೆಚ್ಚು ಮಾಡಬೇಕು ಎಂದು ಹೇಳುವುದಾದರೆ ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಹೆಗಡೆಯವರು ರಾಜ್ಯದಲ್ಲಿ ಆಡಿಕೆಯ ಉತ್ಪಾದನೆ ಹೆಚ್ಚಾಗಿದೆ ಟ್ಯಾಕ್ಸ್ ದರವನ್ನೂ ಹೆಚ್ಚಾಗಿದೆ, ಆದರೆ ಕಲೆಕ್ಷನ್ ಆಫ್ ಟ್ಯಾಕ್ಸಸ್ ಪ್ರಪೋರ್ ಷನೇಟ್‌ಲಿ ಹೆಚ್ಚಾಗಿಲ್ಲ ಎಂದು ಹೇಳುತ್ತಿದ್ದಾರೆ, "ಸೋರಿ ಹೋಗುತ್ತಿರುವ ಕರವನ್ನು ನಿಲ್ಲಿಸಿ. ಹೆಚ್ಚಿನ ಬೆಲೆಗನುಗುಣವಾಗಿ, ಹೆಚ್ಚಿದ ಉತ್ಪಾದನೆಗನುಗುಣವಾಗಿ, ಟ್ಯಾಕ್ಸ್ ಕಲೆಕ್ಷನ್ ಹೆಚ್ಚಾಗಬೇಕು, ಅದನ್ನು ಮಾಡುತ್ತೀರಾ ?

ಶ್ರೀ ಎಸ್, ಎಂ. ಯಾಹ್ಯಾ.—ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಕಲೆಕ್ಷನ್ ೧೯೭೨–೭೩ರಲ್ಲಿ ೬೦ ಲಕ್ಷ ರೂಪಾಯಿಗಳಿತ್ತು, ೧೯೭೩–೭೪ರಲ್ಲಿ ೯೦ ಲಕ್ಷ ರೂಪಾಯಿಗಳಿತ್ತು ೧೯೭೬–೭೭ರಲ್ಲಿ ೧೭೦ ಲಕ್ಷ ರೂಪಾಯಿಗಳಾಯಿತು. ೧೯೭೭–೭೮ರಲ್ಲಿ ೧೮೩ ಲಕ್ಷ ರೂಪಾಯಿಗಳಿಗೆ ಹೆಚ್ಚಾಯಿತು. ಇನ್ನು ಟ್ಯಾಕ್ಸ್ ಸೋರಿ ಹೋಗದ ಹಾಗೆ ನೋಡಿಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾವು ಟ್ಯಾಕ್ಸ್ ಕಲೆಕ್ಷನ್ ಸೊಸೈಟಿಯವರಿಗೆ ಕೊಟ್ಟಿರುವುದರಿಂದ ಸರಿಯಾಗಿ ಆಗುತ್ತಿದೆ, ಆದರೂ ಇನ್ನೂ ಬಿಗಿಯಾದ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ. ಅಡಿಷನಲ್ ಟ್ಯಾಕ್ಸ್ ಹಾಕುವುದನ್ನು ಸಹ ನಾವು ಯೋಚನೆ ಮಾಡುತ್ತೇವೆ.

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಸದಸ್ಯರಾದ ಹೆಗಡೆಯವರು ಟ್ಯಾಕ್ಸ್ ಹೆಚ್ಚು ಮಾಡಿ ಎಂದು ಕೇಳಲಿಲ್ಲ, ಈಗಾಗಲೆ ವಿಧಿಸಿರುವ ಕರ ಜಾಸ್ತಿಯಾಗಿದೆ. ಇನ್ನೂ ಹೆಚ್ಚು ಮಾಡುವುದಕ್ಕೆ ಹೋಗಬೇಡಿ. ೧೯೭೭–೭೮ರಲ್ಲಿ ಎಷ್ಟು ಕರಗಳನ್ನು ಹಾಕಿದ್ದೀರಿ ಎನ್ನುವ ವಿವರವನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಎಂ. ಯಾಹ್ಯಾ.—ಸಧ್ಯದಲ್ಲಿ ಸಾಧ್ಯವಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಇಲ್ಲಿ ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಆಡಿಕೆಯ ಬೆಲೆ ೩೫೦ ರೂಪಾಯಿಗಳಿಂದ ೧೧೦೦ ರೂಪಾಯಿಗಳಿಗೆ ಹೆಚ್ಚಾಗಿರುವುದರಿಂದ ಅದಕ್ಕನುಗುಣವಾಗಿ ತೆರಿಗೆ ವಸೂಲಿ ಆಗಿಲ್ಲ ಎಂದು ; ಇಲ್ಲಿ ವರ್ಷದಿಂದ ವರ್ಷಕ್ಕೆ ತೆರಿಗೆ ವಸೂಲಿ ಜಾಸ್ತಿ ಆಗಿರಬಹುದು ; ಆದರೆ ಇದು ಸಾಲದು ; ಸರಿಯಾಗಿ ತೆರಿಗೆ ವಸೂಲಿ ಆಗದೆ ಸೋರಿ ಹೋಗುತ್ತಿದೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ ತೆರಿಗೆ ದರ ಹೆಚ್ಚು ಮಾಡದೆ ತೆರಿಗೆ ವಸೂಲಿ ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ. - ತೆರಿಗೆ ಸೋರಿ ಹೋಗಬಾರದೆಂಬುದೇ ಸರ್ಕಾರದ ಉದ್ದೇಶವಾಗಿದೆ. ಆಡಿಕೆ ಬೆಲೆ ಹೆಚ್ಚಾಗಿರುವುದರಿಂದ ಆದಾಯವೂ ಜಾಸ್ತಿ ಸಿಗಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಮೊದಲು ಇಲ್ಲಿ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಇತ್ತು ; ಅದನ್ನು ಈಗ ಸಿಂಗಲ್ ಪಾಯಿಂಟ್ ಮಾಡಿದ್ದೇವೆ. ಇದರಿಂದ ಟ್ಯಾಕ್ಸ್ ಜಾಸ್ತಿ ನಮಗೆ ಸಿಗುವುದಿಲ್ಲ. ಮಲ್ಟಿ ಪಾಯಿಂಟ್ ಇದ್ದಿದ್ದರೆ ಈಗಿನ ಮೂರರಷ್ಟು ತೆರಿಗೆ ನಮಗೆ ಬರುತ್ತಿತ್ತು. If it is multi-point, it can be three times or four times. That is one of the reasons where you cannot find a very steep rise.

ಶ್ರೀ ಭೀಮಣ್ಣ ಖಂಡ್ರೆ.—ತೆರಿಗೆ ಪ್ರಮಾಣ ಕಡಿಮೆ ಇದ್ದರೆ ಜಾಸ್ತಿ ವಸೂಲಿಯಾಗುತ್ತದೆ, ತೆರಿಗೆ ಪ್ರಮಾಣ ಜಾಸ್ತಿ ಇದ್ದರೆ ಕಡಿಮೆ ವಸೂಲಿಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಇದಕ್ಕೆ ಕಾರಣ ವ್ಯಾಪಾರಸ್ಥರು ಸರಿಯಾಗಿ ಲೆಕ್ಕ ಕೊಡದೆ ತಿಂದು ಹಾಕುತ್ತಾರೆ. ಮತ್ತು ತೆರಿಗೆ ಕಡಿಮೆ ಇರುವಂತಹ ಹೊರರಾಜ್ಯಗಳಿಗೆ ಮಾಲನ್ನು ಕಳುಹಿಸುತ್ತಾರೆ. ಆದಕಾರಣ ಬಾರ್ಡರ್ ಏರಿಯಾದಲ್ಲಿ ಇದರ ವ್ಯಾಪಾರ ಜಾಸ್ತಿ ನಡೆಯದಂತೆ ಮಾಡಲು ತೆರಿಗೆ ಪ್ರಮಾಣ ಕಡಿಮೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ,—ಮಾನ್ಯ ಸದಸ್ಯರು ಹೊಸದಾದ ಫಿಲಾಸಫಿ ಹೇಳುತ್ತಿದ್ದಾರೆ. ಮತ್ತು ಚಾಲೆಂಜ್ ಮಾಡುತ್ತಾರೆ. ಇಲ್ಲಿ ಜನರಲ್ ಆಗಿ ತೆರಿಗೆ ವಸೂಲಿ ಕಡಿಮೆ ಆಗಿದೆ ಎಂದು ಹೇಳುತ್ತಾರೆ. ಆದರೆ ಸಮಗೆ ಕಡಿಮೆಯಾಗಿದೆ ಎಂದು ಕಾಣುವುದಿಲ್ಲ. ಎರಡನೆಯದಾಗಿ ಮಾನ್ಯ ಸದಸ್ಯರು ಬಾರ್ಡರ್ ಏರಿಯಾದ ಬಗ್ಗೆ ಹೇಳಿದರು, ಈ ವಿಚಾರ ಅವರಿಗೆ ಸರಿಯಾಗಿ ತಿಳಿದಿಲ್ಲ, ಏಕೆಂದರೆ ಆ ಭಾಗದಲ್ಲಿ ಇದರ ವ್ಯಾಪಾರ ಹೆಚ್ಚಾಗಿ ನಡೆಯುವುದಿಲ್ಲ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಈ ವ್ಯಾಪಾರದಲ್ಲಿ ಮಾರಾಟ ಕರ ಸರಿಯಾಗಿ ವಸೂಲಿಯಾಗದೆ ಸೋರಿ ಹೋಗುತ್ತಿರುವುದು ನಿಜ. ಮಾನ್ಯ ಮಂತ್ರಿಗಳು ಹೇಳಿದ್ದು ಸರಿಯಲ್ಲ ; ಇದಕ್ಕೆ ಉದಾಹರಣೆಯಾಗಿ ನಾವು ಇಲ್ಲಿ ಕೊಟ್ಟಿರುವ ಕೇಂದ್ರ ಮಾರಾಟ ಕರದ ವಸೂಲಿಯನ್ನು ನೋಡಿದರೆ, ೧೯೭೨–೭೩ರಲ್ಲಿ ಎರಡು ಪರ್ಸೆಂಟ್ ತೆರಿಗೆ ದರ ಇದ್ದಾಗ ೧೫.೦೧ ಲಕ್ಷ ರೂಪಾಯಿಗಳು ವಸೂಲಿಯಾಗಿದ್ದರೆ, ಆದೇ ೧೯೭೬–೭೮ರಲ್ಲಿ ಮೂರುವರೆ ಪರ್ಸೆಂಟ್ ಪ್ರಕಾರ ತೆರಿಗೆ ವಸೂಲಿ ಮಾಡಿದ್ದರೂ ಸಹ ಕೇವಲ ೨೩.೪೭ ಲಕ್ಷ ರೂಪಾಯಿಗಳು ವಸೂಲಿಯಾಗಿದೆ. ಅಡಿಕೆ ದರ ಹೆಚ್ಚಾಗಿದ್ದರೂ ಸಹ ತೆರಿಗೆ ವಸೂಲಿ ಜಾಸ್ತಿಯಾಗಿಲ್ಲ. ಇದು ಬಹಳ ಸೋರಿ ಹೋಗದೆ. ನನ್ನ ಲೆಕ್ಕದ ಪ್ರಕಾರ ೪ ಕೋಟಿ ರೂಪಾಯಿಗಳಷ್ಟು ವಸೂಲಿಯಾಗ ಬೇಕಾಗಿತ್ತು. ಆದರೆ ಸರಿಯಾಗಿ ವಸೂಲಿ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಡಿಕೆ ವ್ಯಾಪಾರ ಮಾಡಲು ಸಹಕಾರಿ ಸಂಸ್ಥೆಗಳನ್ನು ಏನು ರಚನೆ ಮಾಡಲಾಗಿದೆ, ಅವುಗಳಿಂದ ತೆರಿಗೆ ವಸೂಲಿ ಸರಿಯಾಗಿ ಆಗುತ್ತಿದೆ. ಆದರೆ ಖಾಸಗಿಯವರು ತೆರಿಗೆ ಕೊಡದೆ ತಪ್ಪಿಸುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತಾರೆಂದು ನಾನು ಕೇಳುತ್ತಿರುವುದು ? ಈ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿರುವ ಸಹಕಾರಿ ಸಂಸ್ಥೆಗಳು ದಿವಾಳಿಯಾಗಬಹುದು; ಆದ ಕಾರಣ ತೆರಿಗೆ ವಸೂಲಿ ಹೆಚ್ಚು ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳುತ್ತೇನೆ ?

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಹೇಳಿದ್ದನ್ನೆ ನಾಲ್ಕು ಸಲ ಹೇಳಿದರೆ ಏನೂ ಪ್ರಯೋಜನವಿಲ್ಲ. ಆದ ಕಾರಣ ಎಲ್ಲಿ ಹೆಣ್ ಸೋರಿಹೋಗುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ತೋರಿಸಬೇಕೆ ಹೊರತು ಹೇಳಿದ್ದನ್ನೇ ನಾಲ್ಕು ಸಲ ಹೇಳಿದರೆ ತೆರಿಗೆ ಜಾಸ್ತಿ ವಸೂಲಿಯಾಗುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Primary Co-operative Societies in Raichur District

1007 SRI M. GANGANNA (Kustagi).—Will the Minister for Co-operation be pleased to state.—

(a) the number of primary co-operative societies in Raichur District before and after reorganisation ;

(b) the number of persons who worked as paid secretaries, honorary secretaries and pool secretaries in these societies ;

(c) the number of persons who are working as paid secretaries and pool secretaries after the reorganisation ; out of them, the number of persons belonging to backward classes, harijans, girijans and minorities ;